RegNo BG 155

Sri "SATYAVADI"
— DAILY —
MYSORE 4
46 th Year

Protect the cow

— ೨೯ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಂಯುರು [ಬಿಡಿ ಪ್ರತಿ 3 ಪೈ

13—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ವಿಧಾನ ಸಭೆ ಸ್ಪೀಕರ್ ಚುನಾವಣೆಯಲ್ಲಿ ಗುಂಪು ಪಕ್ಷ

ಗುಂಪು ಹೋಗಿಲ್ಲ

ಆಂಧ್ರದ ಹೊರಬಂದ ಮುಖ್ಯ ಶ್ರೀ ಡಿ. ಸಂಜೀವಯ್ಯನವರು ನಿನ್ನೆ ಹೈದರಾಬಾದಿನಲ್ಲಿ ಹೇಳಿಕೆಯಿತ್ತು, ಶ್ರೀ ಅಲ್ಲೂರಿ ಸತ್ಯನಾರಾಯಣರಾಜುಂವರಿಗೆ ಮಂತ್ರಿಪದವಿ ಕೊಡದಿರುವದು, ಶ್ರೀ ಸಂಜೀವರೆಡ್ಡಿಯವರ ಮಂತ್ರಿಮಂಡಲದಲ್ಲಿ ಗುಂಪಿನ ಭಾವನೆಯನ್ನು ತೋರುವುದು ಎಂದರು ಪ್ರಧಾನಿ ನೆಹರೂರವರ ದೆಸೆಯಿಂದ ತಾವು ನಾಯಕತ್ವ ಚುನಾವಣೆಗೆ ಸ್ಪರ್ಧಿಸಲು ಆಗಲಿಲ್ಲವೆಂದು ತಿಳಿಸಿದರು.

ಎಣಿಕೆಗೆ ಒತ್ತಾಯ

ಪ್ರಜಾಪ್ರಭುತ್ವವನ್ನು ರಕ್ಷಣೆಮಾಡಿ ಸಮಿತಿ ಆಶ್ರಯದಲ್ಲಿ ಅನ್ಯಾಯದಲ್ಲಿ ನಿನ್ನೆ ಭಾರಿ ಬಹಿರಂಗ ಸಭೆ ನಡೆದು ಪಂಜಾಬಿನ ಮುಖ್ಯ ಮಂತ್ರಿ ಪ್ರತಾಪ ಸಿಂಗ್ ಕೈರಾನರು ಸ್ಪರ್ಧಿಸಿದ್ದ ಸರ್ಹಾಲಿ ಕ್ಷೇತ್ರದಲ್ಲಿ ನಡೆದ ಎಣಿಕೆ ಬೇಕೆಂದು ಒತ್ತಾಯ ಮಾಡಲಾಯಿತು. ವಾಸ್ಸರ್ ತಾರಾಸಿಂಗರು ಮಾತನಾಡಿ ಅಲ್ಲಿನ ಚುನಾವಣೆ ಅಧಿಕಾರಿ ಸಸ್ಪೆಂಡು ಆಗಬೇಕೆಂದು ತಿಳಿಸಿದರು.

ಸಂಘಟನೆಗೆ ಯತ್ನ

ಜಯ್ಪುರದಿಂದ ಬಂದಿರುವ ವರದಿ ಪ್ರಕಾರ ರಾಜಸ್ಥಾನದ ಆಡಳಿತಪಕ್ಷದ ವಿರೋಧವಾಗಿ ಸ್ವತಂತ್ರ ಪಕ್ಷ ಮತ್ತು ಜನಸಂಘದ ಸಂಯುಕ್ತರಂಗ ಮಾಡುವ ಪ್ರಯತ್ನಗಳು ಆಗುತ್ತಿವೆ ದೆಹಲಿಯಿಂದ ನಿನ್ನೆ ಜಯ್ಪುರಕ್ಕೆ ಆಗಮಿಸಿದ ಮಹಾರಾಣಿ ಗಾಯತ್ರೀ ದೇವಿಯವರು ವಿವಿಧ ಪಕ್ಷಗಳ ನಾಯಕರೊಂದಿಗೆ ಮಾತುಕತೆ ನಡೆಸುತ್ತಿರುವರು.

ರಾಜ್ಯಸಭೆ ಸದಸ್ಯತ್ವ ಬೇಕಾಗಿಲ್ಲವಂತೆ

ಅಪೇಕ್ಷಿಸಿದ್ದಾಗ್ಯೂ ಪಾರ್ಲಿಮೆಂಟರಿ ಸಮಿತಿ ತಮಗೆ ರಾಜ್ಯಸಭೆಗೆ ಅವಕಾಶವಿತ್ತಿರುವದನ್ನು ಆಂಧ್ರದ ಮಾಜಿ ಮಂತ್ರಿ ಶ್ರೀ ಅಲ್ಲೂರಿಸತ್ಯನಾರಾಯಣರಾಜುಂವರು ಒಪ್ಪಿಕೊಂಡಿಲ್ಲ ಆಂಧ್ರ ವಿಧಾನ ಸಭೆಯಲ್ಲಿಯೇ ಇರುವದಾಗಿ ಅವರು ತಿಳಿಸಿದ್ದಾರೆ. ನಾನು ದೆಹಲಿಯಲ್ಲಿ ಇದ್ದರೆ ನೀವು ಆಂಧ್ರದಲ್ಲಿ ಇರಿ ನೀವು ಆಂಧ್ರದಲ್ಲಿ ಇದ್ದರೆ ನೀವು ದೆಹಲಿಯಲ್ಲಿ ಇರಿ ಎಂದು ಆಂಧ್ರ ಮುಖ್ಯ ಮಂತ್ರಿ ಶ್ರೀ ಎ. ಸಂಜೀವರೆಡ್ಡಿ ಅವರಿಗೆ ತಿಳಿಸಿದ್ದರು

ಸರ್ಕಾರಿ ನೀತಿಗೆ ಜಯ

ಭಾರತದರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ನವದೆಹಲಿಯಲ್ಲಿ ಪಾರ್ಲಿಮೆಂಟಿನ ಕಡೆಯ ಅಧಿವೇಶನ ಉದ್ದೇಶಿಸಿತ್ತಾ, ಈಗ ನಡೆದ ಚುನಾವಣೆಯಲ್ಲಿ ಸರ್ಕಾರದಿಂದ ವಿದೇಶ ಹಾಗೂ ಒಳ ಆರ್ಥಿಕ ನೀತಿಗಳಲ್ಲಿ ವಿಶ್ವಾಸವಿದೆ ಎಂಬುದು ನಿಶ್ಚಯವಾಗಿದ್ದು ಎಂದರು. ವೇಗವಾಗಿ ಪ್ರಪಾಜಿಸುವ ತಾವಾದದ ಹಾದಿಗೆ ಅಜ್ಜೆ ದೊರೆತಿದೆ ಎಂದರು.

೦೦

ಪಿಲಿಸಲ್ಲಿ ನಿಶ್ಶಸ್ತ್ರೀಕರಣ ಬಗ್ಗೆ ಅಂತರ್ ಸಮ್ಮೇಳನ ಸೇರಬೇಕೆಂದು ರಷ್ಯ ಪ್ರಧಾನಿ ಕ್ರುಶ್ಚೇವ್ ತಿಳಿಸಿದ್ದಾರೆ

ಸರ್ಕಾರಿ ಉದ್ಯೋಗಿಗಳ ವಿಚಾರಣೆ ಮತ್ತು ಶಿಕ್ಷೆ

★

ನವದೆಹಲಿ 12— ಕೇಂದ್ರ ಗೃಹ ಮಂತ್ರಿ ಶಾಖೆಗೆ ಸೇರಿದ ವಿಶೇಷ ಪೋಲೀಸು ಸೇವಾ ವಿಭಾಗದವರು 1962 ರ ಜನವರಿ ತಿಂಗಳಲ್ಲಿ 93 ಪ್ರಸಂಗಗಳಲ್ಲಿ 106 ಜನ ಸರ್ಕಾರಿ ಉದ್ಯೋಗಿಗಳನ್ನು ಬಹಿರಂಗ ವಿಚಾರಣೆಗೆ ಗುರಿಮಾಡಿದ್ದಾರೆ; ನಾಲ್ಕು ಪ್ರಸಂಗಗಳಲ್ಲಿ ಲಂಚ ಸ್ವೀಕರಿಸಿದ್ದಾಗ ಸರ್ಕಾರಿ ಉದ್ಯೋಗಿಗಳು ಸಿಕ್ಕಿಬಿದ್ದಿದ್ದಾರೆ — ಒಬ್ಬ ಗೆಜಿಟೆಡ್ ಅಧಿಕಾರಿಯೂ ಸೇರಿ 10 ಜನ ಸರ್ಕಾರಿ ಉದ್ಯೋಗಿಗಳು ಮತ್ತು ಒಬ್ಬ ಖಾಸಗಿ ವ್ಯಕ್ತಿ ಇವರಿಗೆ ಮೂರು ವರ್ಷಗಳ ವರೆಗೆ ಶಿಕ್ಷೆ ಮತ್ತು 4105 ರೂಗಳಷ್ಟು ದಂಡವನ್ನು ವಿಧಿಸಲಾಯಿತು — ಲಂಚಗಳಿಕೆಯ ದುರ್ವರ್ತನೆ, ಮೋಸ ಮತ್ತು ನಂಬಿಕೆದ್ರೋಹಗಳ ಅಪರಾಧಗಳ ಮೇಲೆ ಭೂಸೇನೆಯ ಒಬ್ಬ ಜೂನಿಯರ್ ಕಮಿಷನ್ಡ್ ಅಧಿಕಾರಿ ವಿರುದ್ಧ 53 ಜನ ನಾನ್‌ಗೆಜಿಟೆಡ್ ಉದ್ಯೋಗಿಗಳ ವಿರುದ್ಧ ವಿಚಾರಣೆಗಳನ್ನು ನಡೆಸಿ ಮೊಖದ್ದಮೆ ಹೂಡಲಾಗಿದೆ; ದುರ್ವರ್ತನೆ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿದ್ದ ಆರು ಜನರಿಗೆ ಗೆಜಿಟೆಡ್ಡ್ ಅಧಿಕಾರಿಗಳೂ ಸೇರಿ 41 ಜನ ಸರ್ಕಾರಿ ಉದ್ಯೋಗಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ವಂದಿ ಮಾಡಲಾಗಿದೆ — ಏಳು ಜನ ಗೆಜಿಟೆಡ್ಡ್ ಅಧಿಕಾರಿಗಳೂ ಸೇರಿ 39 ಜನ ಸರ್ಕಾರಿ ಉದ್ಯೋಗಿಗಳಿಗೆ ಸಂಬಂಧಪಟ್ಟ ಇಲಾಖೆಗಳೇ ಶಿಕ್ಷೆ ವಿಧಿಸಿವೆ: ಇಲಾಖೆಗಳೇ ಕ್ರಮ ಕೈಗೊಂಡ ಫಲವಾಗಿ ಕಪ್ಪಿತಕ್ಕರಿಂದ 2094 ರೂಗಳಷ್ಟು ಹಣವನ್ನು ವಸೂಲಿ ಮಾಡುವ ಬಗ್ಗೆ ಅಜ್ಞೆ ಹೊಂಡಿಸಲಾಗಿದೆ; ಏಳು ಜನರನ್ನು ಕೆಲಸದಿಂದ ವಜಾ ಮಾಡಲಾಯಿತು; ಮೂವರನ್ನು ಕೆಲಸದಿಂದ ತೆಗೆದುಹಾಕಲಾಯಿತು, ಇಬ್ಬರು ಕೆಲಸದಿಂದ ರಾಜೀನಾಮೆ ಇತ್ತರು; ಉಳಿದವರನ್ನು ಜೇರೆ ರೀತಿಯಲ್ಲಿ ಶಿಕ್ಷಿಸಲಾಯಿತು.

ಚಿನ್ನದ ಕಳ್ಳಸಾಗಾಟಗಾರನ ಬಂಧನ

ಉರ್ಗಂ (ಕೆಜಿಎಫ್) ಗೂಢಚಾರ ಇಲಾಖೆಯ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಮತ್ತು ಅವರ ಸಿಬ್ಬಂದಿಯವರು ಅಂಡರ್ಸನ್‌ಪೇಟೆಯ ಜಂಡಾ ಸ್ಟ್ರೀಟಿನ ಗೌಸು ಕಾಂಪೌಂಡಿನ ನಿವಾಸಿಯೋರ್ವನು ಸ್ವಂಜು ಬಂಗಾರ ಅಂಶವುಳ್ಳ ಉಸುಗು ಮೊದಲಾದುವುಗಳನ್ನು ಇಟ್ಟುಕೊಂಡಿದ್ದಕ್ಕಾಗಿ ಅವನನ್ನು ಬಂಧಿಸಿದರು.

ಮೈಸೂರು ಮಂತ್ರಿಮಂಡಲ

ಮೈಸೂರು ಮಂತ್ರಿಮಂಡಲದಲ್ಲಿ 14 ಮಂತ್ರಿಗಳು 10 ಮಂತ್ರಿಗಳು ಇರುವರು ಎಂದು ಮುಖ್ಯಮಂತ್ರಿ ಶ್ರೀ ಎಸ್ ಆರ್ ಕಂಠಿ ನಿನ್ನೆ ದೆಹಲಿಯಿಂದ ಬಂದಸಂತರ ತಿಳಿಸಿದರು

ಮತಸಂಗ್ರಹ ಪ್ರಶ್ನೆ ಇಲ್ಲ

ಕಾಶ್ಮೀರದಲ್ಲಿ ಮತಸಂಗ್ರಹ ಪ್ರಶ್ನೆ ಇಲ್ಲವೆಂದು ಕಾಶ್ಮೀರ ಮುಖ್ಯ ಮಂತ್ರಿ ಶ್ರೀ ಭಕ್ಷಿ ಗುಲಾಂ ಮುಹಮ್ಮದರು ಶ್ರೀನಗರದಲ್ಲಿ ನಿನ್ನೆ ತಿಳಿಸಿದರು

ಆಗಮನ

ಶ್ರೀಮತಿ ಕೆನೆಡಿ ನಿನ್ನೆ ದೆಹಲಿಗೆ ಆಗಮಿಸಿದರು ಪ್ರಧಾನಿ ನೆಹರೂ, ಶ್ರೀ ವಿ ಕೆ ಕೃಷ್ಣಮೆನನ್ ಮುಂತಾದವರು ಅವರನ್ನು ಸ್ವಾಗತಿಸಿದರು.

ನಾಳೆಯ ಕಾರ್ಯಕ್ರಮ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ
14 ನವಮಿ ಆದರ್ಶ

೦೦

ಕೊಲಂಬಿಯಾದಲ್ಲಿ ಭೂಪಾತವಾಗಿ 16 ಮಂದಿ ಮೃತರು.

ಭಾರತ ಗಡಿ ಬಗ್ಗೆ ತನ್ನ ನೀತಿ ಬದಲಾಯಿಸುವಂತೆ ಭಾರತ ಅಧ್ಯಕ್ಷರು ಚೀನಾ ಕೋರಿಕೆ ತಿಳಿಸಿರುವರು

ಘಂಟಾನಾದದ ಮಹತ್ವ

(ಮುಂದುವರಿದುದು)

ಗಂಟೆ ವಸ್ತು ಜಾಗಟೆಯನ್ನು ನಿರ್ಮಿಸಲು ಕಂಚು ಪ್ರಯುಕ್ತವಾಗುತ್ತದೆ: ಕಂಚು ಎಂಡು ವಸ್ತುಗಳಿಂದ (ತಾಮ್ರ ಮತ್ತು ಶಮಂದಿಂದ) ತಯಾರಾಗುವುದು : ಅವುಗಳಲ್ಲಿ ತಾಮ್ರವು ವಿದ್ಯುತ್ಪ್ರವಾಹಾಲಕವು, ತಮಂ ಸಂಗ್ರಹಕೋಶವು : ಜಾಗಟೆಯ ಮೇಲೆ ಬೀಳುವ ಹೊಡೆತದಿಂದಲೂ, ಗಂಟೆಯ ಟಂಕಾರದಿಂದಲೂ ಒಂದು ಬಗೆಯ ಕಂಪನೆಗಳನ್ನೊಳ ತರಂಗಗಳು ಹುಟ್ಟುತ್ತವೆ ; ನ್ಯೂಯಾರ್ಕಿನ ಸುಪ್ರಸಿದ್ಧ ವಿದ್ವಾಂಸರಾದ ಪ್ರೊಫೆಸರ್ ಪಿ ಡಬ್ಲ್ಯು ರೇಲೇ ಮಹೋದಯರು ಹೀಗೆ ಬರೆಯುತ್ತಾರೆ —

' ಈ ತರಂಗಗಳು ಅದ್ಭುತ ಶಕ್ತಿ ಸಂಪನ್ನವಾಗಿರುತ್ತವೆ : ಅವುಗಳಲ್ಲಿ ಹದಿನೈದರಿಂದ ಹಿಡಿದು ಮೂವತ್ತೇಳು ಕುದುರೆಗಳವರಿಗಿನ ಶಕ್ತಿ ಇರುತ್ತದೆಂದು ವಿದ್ಯುನ್ಮಾಪಕಯಂತ್ರದ ಪರೀಕ್ಷಣವು ಈಗ ಸಿದ್ಧಗೊಳಿಸಿದೆ ; ಅಲೆಯು ಹೊಂಡಲಾರದಂತಹ ವಜ್ರಿದ ಕೋಣೆಯೊಳಗೆ ಬಂಧಿತವಾಗಿ ನಿಂತಿಗಳವರೆಗೆ ಜಾಗಟೆ ಬಾರಿಸಿದುದಾದರೆ ನಿಸ್ಸಂದೇಹವಾಗಿ ಯಾವುದಾದರೂ ಗೋಡೆಯು ಒಡೆದುಹೋಗುವುದು. ಈ ಸಿದ್ಧ ಪ್ರಯೋಗವು ಸ್ವಾಸ್ಥ್ಯ ರೋಗಗಳಿಗೆ ಬಹಳ ಲಾಭಪ್ರದವಾದದ್ದು ಕಂಚಿನ ಪಾತ್ರೆಯ ಧ್ವನಿಕಂಪನಗಳು ವಿಷನಾಶಕಗಳೂ ಉತ್ತೇಜನದಾಯಕಗಳೂ ಆಗಿರುತ್ತವೆ : ಬಹ್ಯಕಾ ನಿವಾಸಿಗಳೂ, ಹಿಂದೂಗಳೂ ಕಂಚಿನ ಪಾತ್ರೆ ಬಾರಿಸಿ ವಿಷದ ಹಾವು ಕಚ್ಚಿದ ರೋಗಿಯನ್ನು ಗುಣಪಡಿಸುವ ಕ್ರಿಯೆಯನ್ನು ಪ್ರಾಚೀನ ಕಾಲದಿಂದ ತಿಳಿದುಕೊಂಡು ಬಂದಿರುವರು : ಮಾಸ್ಕೋನಿನ ಸ್ಯಾನಿಟೋರಿಯಂನಲ್ಲಿ ಕಂಚಿನ ಶಬ್ದ ಧ್ವನಿಯಿಂದ ಕ್ಷಯ ರೋಗಗಳನ್ನು ಸ್ವಸ್ಥಗೊಳಿಸುವ ಸಫಲ ಪ್ರಯೋಗಗಳಾಗುತ್ತಿವೆ ; ನಿರ್ದಿಷ್ಟ ಹಾಗೂ ಅವಸಾಶಿತ ಜ್ಞಾನ ಜಂತುಗಳಿಗೆ ಜಾಗಟೆಯು ಒಂದು ಸ್ಫೂರ್ತಿಯನ್ನು ಕೊಡುತ್ತದೆ.

ನಿಮ್ಮಲ್ಲಿಗೆ ಹಲವರು ಬಕ್ಕಿಂಗಹ್ಯಾಮಿನ 1916 ನೆಯ ಇಸವಿಯ ಮೊಖದ್ದಮೆಯ ವಿಷಯ ಕೇಳಿರಬಹುದು ! ಅದರಲ್ಲಿ ಓರ್ವ ನಾಸ್ತಿಕನು ನೆರೆಯ ಚರ್ಚಿನಲ್ಲಿ ಹೊಡೆಯುತ್ತಿರುವ ಗಂಟೆಯಿಂದ ಆರೋಗ್ಯಹಾನಿಯಾಯಿತೆಂದು ಕೋರ್ಟಿನಲ್ಲಿ ವ್ಯಾಜ್ಯ ಹೂಡಿದ್ದನು ; ಘಂಟಾಧ್ವನಿಯಿಂದ ಶಾರೀರಿಕ ಕ್ಷತಿಯುಂಟಾಗುತ್ತದೆಂಬುದು ವಾದಿಯ ಹೇಳಿಕೆಯಾಗಿತ್ತು ; ಘಂಟಾ ಶಬ್ದದಿಂದಾಗುವ ಪರಿಣಾಮವನ್ನು ಪರೀಕ್ಷಿಸಲು ಕೋರ್ಟಿನವರು ಮೂರು ಮಂದಿ ಪ್ರಮುಖ ವೈಜ್ಞಾನಿಕರಿಂದೊಂದು ಬೋರ್ಡನ್ನು ನಿಯೋಜಿಸಿದರು : ಈ ಪರೀಕ್ಷಣವು ಬಹು ಮೂಲ್ಯ (ಬೆಲೆಯ) ಯಂತ್ರಗಳ ಮೂಲಕ ಏಳು ತಿಂಗಳ ಕಾಲ ನಡೆಯುತ್ತಾ ಇತ್ತು ; ಕೊನೆಗೆ ವೈಜ್ಞಾನಿಕ ಬೋರ್ಡು-- ಘಂಟಾನಾದದಿಂದ ಹಾನಿಯಾಗುವುದು ದೂರುಳಿದು ಲಾಭವೇ ಆಗುವುದೆಂದೂ, ಹಲವು ಶಾರೀರಿಕ ಕಷ್ಟಗಳು ಕಳೆದುಹೋಗಿ ಮಾನಸಿಕ ಉತ್ಕರ್ಷವಾಗುವುದೆಂದೂ ಘೋಷಿಸಿತು.

SHAKTI SUDHA

A Superb Tonic

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ವುಡ್‌ಲ್ಯಾಂಡ್ಸ್ ಯಶಸ್ವಿ 5 ನೇ ವಾರ

ಈ ಮನಮೋಹಕ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

— — Language Training — —

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.